

ಅರುಣ ಪಿ. ಭಟ್ಟ

## ವಾರಭವಿಷ್ಯ 07.11.2019ರಿಂದ 13.11.2019ರವರೆಗೆ

**ಮೇಷ**

ಮುಖ್ಯವಾದ ಪಟ್ಟಿಯೊಂದನ್ನು ಸಿದ್ಧಮಾಡಿಕೊಳ್ಳುವುದಕ್ಕೆ ವಾರದ ಶುರುವಿನಲ್ಲಿ ಸಿದ್ಧರಾಗುತ್ತೀರಿ. ಈ ಅವಧಿಯಲ್ಲಿ ತಾಳ್ಮೆ ಮತ್ತು ಧೈರ್ಯ ಬಹಳ ಮುಖ್ಯವಾಗುತ್ತದೆ. ಸಮಯದ ಕೊರತೆ ವಿಪರೀತವಾಗಿ ಕಾಡುತ್ತದೆ.

ಶುಭದಿನ: 12. ಶ್ರೀ ದುರ್ಗಾಪಾರಾಯಣ ಮಾಡಿರಿ

**ವೃಷಭ**

ವಾರದ ಶುರುವಿನಲ್ಲಿ ವೈಯಕ್ತಿಕ ವಿಷಯಗಳ ಪರಾಮರ್ಶೆಗೆ ಹೆಚ್ಚು ಸಮಯವನ್ನು ಮೀಸಲಿಡಲಿದ್ದೀರಿ. ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಗಳಿವೆ. ಉದ್ಯೋಗದಲ್ಲಿ ಒತ್ತಡದ ಸನ್ನಿವೇಶ. ದೈಹಿಕ ಕ್ಷಮತೆ ಉತ್ತಮವಾಗಿರುತ್ತದೆ.

ಶುಭದಿನ: 8. ವಿಷ್ಣು ಸಹಸ್ರನಾಮ ಪಠಿಸಿರಿ.

**ಮಿಥುನ**

ವಾರದ ಶುರುವಿನಲ್ಲಿ ಕೌಟುಂಬಿಕ ವಿಚಾರದಲ್ಲಿ ಉತ್ತಮ ಅವಕಾಶ. ಗ್ರಹಗತಿಗಳು ಉತ್ತಮವಾಗಿ ಇರುವುದರಿಂದ ನಿಮಗೆ ದೊರೆಯುವ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಿದ್ದೀರಿ. ಅದ್ಭುತವಾದ ಯಶಸ್ಸು ಸಿಗಲಿದೆ.

ಶುಭದಿನ: 9. ಹನುಮಾನ್ ಚಾಲೀಸ್ ಪಠಿಸಿರಿ.

**ಕಟಕ**

ವೃತ್ತಿ ಜೀವನದಲ್ಲಿ ಕೆಲವು ಬಿಕ್ಕಟ್ಟು ಎದುರಾಗುತ್ತವೆ. ವಾರದ ಮಧ್ಯ ಭಾಗದ ಹೊತ್ತಿಗೆ ಆರೋಗ್ಯ ಚೇತರಿಸಿಕೊಳ್ಳುತ್ತದೆ. ಕೌಟುಂಬಿಕವಾಗಿ ಸಂತೋಷ ಸಮಾಧಾನ ಇರುತ್ತದೆ. ವಾರದ ಅಂತ್ಯಕ್ಕೆ ಆರೋಗ್ಯ ಅತ್ಯುತ್ತಮವಾಗುತ್ತದೆ.

ಶುಭದಿನ: 11. ಈಶ್ವರನಿಗೆ ರುದ್ರಾಭಿಷೇಕ ಮಾಡಿರಿ.

**ಸಿಂಹ**

ವಾರದ ಆರಂಭವು ಸಂತೋಷವಾಗಿರುತ್ತದೆ. ಆದಾಯ ಹೆಚ್ಚಿಸಿಕೊಳ್ಳುವುದಕ್ಕೆ ಉತ್ತಮ ಅವಕಾಶ. ನಿಮ್ಮ ಆತ್ಮವಿಶ್ವಾಸ ಮತ್ತಷ್ಟು ಹೆಚ್ಚಾಗಲಿದೆ. ವಾರದ ಮಧ್ಯಭಾಗದಲ್ಲಿ ನಿದ್ರೆಯ ವಿಚಾರದಲ್ಲಿ ತೊಂದರೆ ಎದುರಾಗಲಿದೆ.

ಶುಭದಿನ: 12. ಸೌಂದರ್ಯಲಹರಿ ಪಠಿಸಿರಿ.

**ಕನ್ಯಾ**

ವ್ಯವಹಾರದ ಉನ್ನತಿಗೆ ಹೆಚ್ಚು ಶ್ರಮ. ಈ ಅವಧಿಯಲ್ಲಿ ಆರೋಗ್ಯ ಉತ್ತಮವಾಗಿ ಇರುತ್ತದೆ. ಜತೆಗೆ ಯಾವುದೇ ಚಿಂತೆ ಇರುವುದಿಲ್ಲ. ಗ್ರಹಗತಿಗಳು ಶುಭ ದೃಷ್ಟಿ ಬೀರುವ ಸಮಯ. ವಾರದ ಮಧ್ಯ ಭಾಗದಲ್ಲಿ ಶುಭಕಾರ್ಯ ಯೋಜನೆ.

ಶುಭದಿನ: 8. ಗಣಪತಿಗೆ ದೂರ್ವಾರ್ಚನೆ ಮಾಡಿಸಿರಿ.

**ತುಲಾ**

ಸಿನಿಮಾ, ತಂತ್ರಜ್ಞಾನ ಕ್ಷೇತ್ರದಲ್ಲಿ ಇರುವವರಿಗೆ ಉತ್ತಮ ಪ್ರಗತಿ. ಈ ಅವಧಿಯಲ್ಲಿ ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಸಾಧ್ಯತೆ ಇದೆ. ಕೆಲವರಿಗೆ ರಕ್ತಕ್ಕೆ ಸಂಬಂಧಿಸಿದ ದೋಷಗಳು ಕಾಡಬಹುದು.

ಶುಭದಿನ: 10. ನವಗ್ರಹ ಸ್ತೋತ್ರ ಪಠಿಸಿರಿ.

**ವೃಶ್ಚಿಕ**

ವರ್ಚಸ್ಸನ್ನು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೀರಿ. ವೈಯಕ್ತಿಕ ಸಂಬಂಧದಲ್ಲಿ ಪರಸ್ಪರ ನಿಂದನೆಗಳನ್ನು ಮಾಡುವ ಸಾಧ್ಯತೆ ಇದೆ. ಹೀಗೆ ನಿಂದನೆ ಮಾಡುವ ಮೂಲಕ ನಿರಂತರವಾಗಿ ಸಂಬಂಧಕ್ಕೆ ಪೆಟ್ಟಾಗುತ್ತದೆ.

ಶುಭದಿನ: 10 ಶನಿ ಸ್ತೋತ್ರ ಪಠಣ ಮಾಡಿರಿ.

**ಧನಸ್ಸು**

ಆರೋಗ್ಯ ಚೆನ್ನಾಗಿದೆ ಎಂದು ನಿಮಗೇ ಅನಿಸುತ್ತದೆ. ವೈವಾಹಿಕ ಜೀವನವು ಸಾಮಾನ್ಯವಾಗಿರುತ್ತದೆ. ಕುಟುಂಬ ಜೀವನಕ್ಕೆ ಹೆಚ್ಚಿನ ಸಮಯವನ್ನು ಇಡಬೇಕಾಗುತ್ತದೆ. ವೈಯಕ್ತಿಕ ವಿಚಾರಗಳಲ್ಲಿ ಸವಾಲುಗಳು ಎದುರಾಗುತ್ತವೆ.

ಶುಭದಿನ: 9. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ

**ಮಕರ**

ವಾರದ ಆರಂಭದಲ್ಲಿ ವ್ಯಾಪಾರ ಉದ್ಯಮ ಹಾಗೂ ವ್ಯವಹಾರದ ಬಗ್ಗೆ ಗಮನ ಹೆಚ್ಚು ನೀಡಬೇಕಾಗುತ್ತದೆ. ಅದರ ಜತೆಗೆ ಬಹಳ ಕಾಲದಿಂದ ಜಾರಿಗೆ ತರಬೇಕು ಅಂದುಕೊಂಡಿದ್ದ ವಿಚಾರಗಳನ್ನು ಒಂದೊಂದಾಗಿ ಜಾರಿಗೆ ತರುತ್ತೀರಿ.

ಶುಭದಿನ: 12. ಶಿವಕವಚ ಪಠಣ ಮಾಡಿರಿ.

**ಕುಂಭ**

ಹಣದ ಸದುಪಯೋಗ ಮಾಡಿಕೊಳ್ಳುವ ಯೋಜನೆ. ಆ ನಂತರ ಅದರ ಅನುಷ್ಠಾನಕ್ಕಾಗಿ ಹಾಕುವ ಶ್ರಮಕ್ಕೆ ನಿರೀಕ್ಷಿತ ಫಲಿತಾಂಶ ಕೂಡ ದೊರೆಯಲಿದೆ. ಮಾರಾಟದಲ್ಲಿ ಕಾರ್ಯ ನಿರ್ವಹಿಸುವವರಿಗೆ ಲಾಭ ಗಳಿಸುವ ಅವಕಾಶ.

ಶುಭದಿನ: 11. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.

**ಮೀನ**

ನೀವು ಖರ್ಚು ಮಾಡಿದ ಹಣಕ್ಕೆ ತಕ್ಕ ಪ್ರತಿಫಲ ಇಲ್ಲ ಎಂದು ಸ್ವಲ್ಪ ಮಟ್ಟಿಗೆ ಬೇಸರ ಆಗುತ್ತದೆ. ಇನ್ನು ಆರೋಗ್ಯ ಉತ್ತಮವಾಗಿರುತ್ತದೆ. ವೈಯಕ್ತಿಕ ಹಾಗೂ ಕೌಟುಂಬಿಕ ಜೀವನ ಸುಖವಾಗಿ ಇರುತ್ತದೆ.

ಶುಭದಿನ: 8. ಚಂಡಿ ಪಾರಾಯಣ ಮಾಡಿರಿ.


DHEEPAM
LAMP OIL
BLEND OF 5 OILS

ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ

ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ

